ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	771 (983)
2) ಸದಸ್ಯರ ಹೆಸರು	:	ಶ್ರೀ ಕೆ. ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು)
3) ಉತ್ತರಿಸುವ ದಿನಾಂಕ	:	28-09-2020
4) ಉತ್ತರಿಸುವವರು	:	ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕಾಡು ಪ್ರಾಣಿಗಳಿಂದ ಆಗಿರುವ ಪ್ರಾಣಹಾನಿ, ಬೆಳೆ ನಾಶ ಕುರಿತ ಅಂದಾಜು ಸರ್ಕಾರಕ್ಕಿದೆಯೇ; (ಪ್ರತ್ಯೇಕವಾದ ಸಂಪೂರ್ಣ ಮಾಹಿತಿ ಒದಗಿಸುವುದು)</td><td>
ಹೌದು.

ಕಳೆದ ಮೂರು ವರ್ಷಗಳ ಅವಧಿಯಲ್ಲಿ ವನ್ಯಪ್ರಾಣಿಗಳ ದಾಳಿಯಿಂದ ಉಂಟಾದ ಮಾನವ-ಪ್ರಾಣಹಾನಿ ಪ್ರಕರಣ ವಿವರ ಈ ಕೆಳಕಂಡಂತಿದೆ:
(ರೂ.ಲಕ್ಷಗಳಲ್ಲಿ)
<table>
<tr><th>ಕ್ರಸಂ</th><th>ವರ್ಷ</th><th>ಮಾನವ ಪ್ರಾಣಹಾನಿ ಪ್ರಕರಣ</th><th>ಪಾವತಿಸಿದ ಮೊತ್ತ</th></tr>
<tr><td>1</td><td>2017-18</td><td>35</td><td>175.00</td></tr>
<tr><td>2</td><td>2018-19</td><td>26</td><td>130.00</td></tr>
<tr><td>3</td><td>2019-20</td><td>49</td><td>270.00</td></tr>
<tr><td>4</td><td>2020-21
(ಆಗಸ್ಟ್-2020ರ ವರೆಗೆ)</td><td>13</td><td>90.00</td></tr>
</table>
*2020-21ನೇ ಸಾಲಿನಲ್ಲಿ ಉಂಟಾಗಿರುವ ಒಂದು ಮಾನವ ಪ್ರಾಣಹಾನಿ ಪ್ರಕರಣದಲ್ಲಿ ಮೃತ ವ್ಯಕ್ತಿಯ ವಾರಸುದಾರರಿಗೆ ದಯಾತ್ಮಕಧನವನ್ನು ಪಾವತಿಸಲು ಬಾಕಿ ಇರುತ್ತದೆ.

ಕಳೆದ ಮೂರು ವರ್ಷಗಳ ಅವಧಿಯಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಬೆಳೆನಾಶ ಪ್ರಕರಣ ವಿವರ ಈ ಕೆಳಕಂಡಂತಿದೆ:
(ರೂ.ಗಳಲ್ಲಿ)
<table>
<tr><th>ಕ್ರಸಂ</th><th>ವರ್ಷ</th><th>ಬೆಳೆನಾಶ ಪ್ರಕರಣ</th><th>ಪಾವತಿಸಿದ ಮೊತ್ತ</th></tr>
<tr><td>1</td><td>2017-18</td><td>27,525</td><td>13,69,16,590.00</td></tr>
<tr><td>2</td><td>2018-19</td><td>19,913</td><td>10,28,13,410.00</td></tr>
<tr><td>3</td><td>2019-20</td><td>20,951</td><td>11,22,90,000.00</td></tr>
<tr><td>4</td><td>2020-21
(ಆಗಸ್ಟ್-2020ರ ವರೆಗೆ)</td><td>5,606</td><td>3,35,97,543.00</td></tr>
</table>
</td></tr>
</table>

ಆ)	ಪದೇ ಪದೇ ಕಾಡು ಪ್ರಾಣಿಗಳಿಂದ ಆಗುತ್ತಿರುವ ಪ್ರಾಣಹಾನಿ, ಬೆಳೆ ನಾಶಕ್ಕೆ ಇರಬಹುದಾದ ಕಾರಣವೇನು; (ಪೂರ್ಣ ಮಾಹಿತಿ ಒದಗಿಸುವುದು)	ಇತ್ತೀಚಿನ ವರ್ಷಗಳಲ್ಲಿ ಜನಸಂಖ್ಯೆ ಹೆಚ್ಚಳದಿಂದ ಹೆಚ್ಚಿನ ಅರಣ್ಯ ಪ್ರದೇಶಗಳನ್ನು ಆಹಾರ ಉತ್ಪಾದನೆಗಾಗಿ ಹಾಗೂ ವಾಣಿಜ್ಯ ತೋಟದ ಬೆಳೆಗಳಿಗಾಗಿ ಬಳಸಿಕೊಂಡು ಬಂದಿರುವುದರಿಂದ, ಕಾಡಾನೆಗಳು ವಾಸಿಸುವ ನೈಸರ್ಗಿಕ ಆವಾಸಸ್ಥಾನದ ಪ್ರದೇಶವು ಕಡಿಮೆಯಾಗಿರುತ್ತದೆ. ಅಲ್ಲದೆ, ಕಾಡಾನೆಗಳು ಓಡಾಡುತ್ತಿದ್ದ ಅರಣ್ಯ ಪ್ರದೇಶಗಳಲ್ಲಿ ಅನೇಕ ಅಣೆಕಟ್ಟುಗಳ ನಿರ್ಮಾಣದಿಂದ ಕೆಲವೊಂದು ಅರಣ್ಯಗಳು ಮುಳುಗಡೆಯಾಗಿ ಆನೆಗಳ ಸ್ವಾಭಾವಿಕ ನೆಲೆ ಛಿದ್ರಛಿದ್ರವಾಗಿರುತ್ತದೆ. ಇದರಿಂದ ಕಾಡಾನೆಗಳು ಹಿಂದಿನಿಂದಲೂ ಸಂಚರಿಸುತ್ತಿದ್ದ ದಾರಿಗಳಿಗೆ (ಮೊಗಸಾಲೆಗಳಿಗೆ) ಅಡಚಣೆಯುಂಟಾಗಿರುತ್ತದೆ ಹಾಗೂ, ಅರಣ್ಯ ಪ್ರದೇಶಗಳ ಅಂಚಿನಲ್ಲಿರುವ ಖಾಸಗಿ ಜಮೀನುಗಳಲ್ಲಿ ಕಾಡಾನೆಗಳನ್ನು ಆಕರ್ಷಿಸುವ ಬೆಳೆಗಳಾದ ಭತ್ತ, ತೆಂಗು, ಬಾಳೆ, ಹಲಸು ಮತ್ತು ವಾಣಿಜ್ಯ ಬೆಳೆಗಳಿಗೆ ಆಕರ್ಷಿತಗೊಂಡು ದಾಳಿ ಮಾಡುತ್ತಿರುವುದು ಕಂಡುಬರುತ್ತಿದೆ. ಅಲ್ಲದೆ, ರಾಜ್ಯದಲ್ಲಿ ಆನೆಗಳ ಸಂತತಿಯು ಸಹ ಹೆಚ್ಚಾಗಿರುತ್ತದೆ.
ಇ)	ಕಾಡು ಪ್ರಾಣಿಗಳಿಂದಾಗುತ್ತಿರುವ ಹಾನಿಗೆ ಇದುವರೆವಿಗೆ ಒದಗಿಸಲಾಗಿರುವ ಪರಿಹಾರ ಎಷ್ಟು; ಯಾವ ನಿಯಮಾವಳಿ ಮತ್ತು ಕಾನೂನಾತ್ಮಕ ಅಂಶಗಳನ್ನು ಈ ನಿಟ್ಟಿನಲ್ಲಿ ಅನುಸರಿಸಲಾಗುತ್ತಿದೆ; (ಮಾಹಿತಿ ಒದಗಿಸುವುದು)	ವನ್ಯಪ್ರಾಣಿಗಳ ದಾಳಿಯಿಂದ / ಹಾವಳಿಯಿಂದ ಉಂಟಾಗುತ್ತಿರುವ ಹಾನಿ ಪ್ರಕರಣಗಳಲ್ಲಿ ಪಾವತಿಸಿರುವ ದಯಾತ್ಮಕಧನಹ (Ex-gratia) ವಿವರವನ್ನು ಉಪ ಪ್ರಶ್ನೆ (ಅ) ರಲ್ಲಿ ಉತ್ತರಿಸಲಾಗಿದೆ. ಆದೇಶ ಸಂಖ್ಯೆ: ಅಪಜೀ 66 ಎಫ್‌ಡಬ್ಲ್ಯೂಎಲ್ 2019, ದಿನಾಂಕ: 07-01-2020ರ ಪ್ರಕಾರ ವನ್ಯಪ್ರಾಣಿಗಳಿಂದ ಮೃತಪಟ್ಟಿರುವ ವ್ಯಕ್ತಿಯ ವಾರಸುದಾರರಿಗೆ ಪಾವತಿಸುತ್ತಿರುವ ದಯಾತ್ಮಕಧನವನ್ನು ರೂ.5,00,000/- ಗಳಿಂದ ರೂ.7,50,000/- ಗಳಿಗೆ ಹೆಚ್ಚಿಸಲಾಗಿದ್ದು, ಅದರಂತೆ ದಯಾತ್ಮಕಧನ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೆ, ಆದೇಶ ಸಂಖ್ಯೆ ಅಪಜೀ 61 ಎಫ್‌ಎಪಿ 2018, ದಿನಾಂಕ: 16-10-2018 ರನ್ವಯ ಮೃತರ ಕುಟುಂಬದ ವಾರಸುದಾರರಿಗೆ 05 ವರ್ಷಗಳವರೆಗೆ ರೂ. 2,000/-ಗಳ ಮಾಸಾಶನವನ್ನು ಪಾವತಿಸಲಾಗುತ್ತಿದೆ. ರಾಜ್ಯದಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಬೆಳೆ ಹಾನಿ ಪ್ರಕರಣಗಳಲ್ಲಿ ಆದೇಶ ಸಂಖ್ಯೆ: ಅಪಜೀ 130 ಎಫ್‌ಡಬ್ಲ್ಯೂಎಲ್ 2016, ದಿನಾಂಕ: 19-09-2016ರಲ್ಲಿ ವಿವಿಧ ಬೆಳೆಗಳಿಗೆ ನಿಗದಿಪಡಿಸಿರುವ ದರಗಳನ್ವಯ ದಯಾತ್ಮಕಧನವನ್ನು ಪಾವತಿಸಲಾಗುತ್ತಿದೆ.
ಈ)	ಪದೇ ಪದೇ ಉಂಟಾಗುತ್ತಿರುವ ಈ ಮಾನವ-ಪ್ರಾಣಿ ಸಂಘರ್ಷ ಪ್ರಾಣಹಾನಿ, ಬೆಳೆನಾಶ ನಿಯಂತ್ರಿಸುವ ನಿಟ್ಟಿನಲ್ಲಿ ಸರ್ಕಾರದ ದೀರ್ಘಾವಧಿ ಆಲೋಚನೆಯೇನು? (ಮಾಹಿತಿ ಒದಗಿಸುವುದು)	ಮಾನವ-ಪ್ರಾಣಿ ಸಂಘರ್ಷ ಪ್ರಾಣಹಾನಿ, ಬೆಳೆನಾಶ ನಿಯಂತ್ರಿಸುವ ನಿಟ್ಟಿನಲ್ಲಿ ವನ್ಯಜೀವಿಗಳು ಕಾಡಿನಿಂದ ಹೊರಗೆ ಬರದಂತೆ ಇಲಾಖಾ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. 1. ರಾಜ್ಯದಲ್ಲಿರುವ ವನ್ಯಜೀವಿಗಳಿಗೆ ಸಂಪೂರ್ಣ ರಕ್ಷಣೆ ನೀಡುವ ಸಲುವಾಗಿ ರಾಷ್ಟ್ರೀಯ ಉದ್ಯಾನವನ, ಅಭಯಾರಣ್ಯ, ಹುಲಿ ಮೀಸಲು ಅರಣ್ಯ ಸಂರಕ್ಷಿತ ಮೀಸಲು ಅರಣ್ಯಗಳನ್ನು ಘೋಷಿಸಲಾಗಿರುತ್ತದೆ. 2. ಅರಣ್ಯ ಪ್ರದೇಶದಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು 2019-20ನೇ ಸಾಲಿನಿಂದ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಹಂತ ಹಂತವಾಗಿ ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲು ಅವಕಾಶ ಮಾಡಲಾಗಿದೆ. 3. ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನಗೊಳಿಸಿ ವನ್ಯಪ್ರಾಣಿಗಳ ಆವಾಸಸ್ಥಾನವನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗುತ್ತಿದೆ.

		4. ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ/ನಿರ್ವಹಣೆ. ಆನೆತಡೆ ಕಂದಕ ನಿರ್ಮಾಣ/ನಿರ್ವಹಣೆ ಮಾಡಲಾಗಿದ್ದು ಮತ್ತು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. 5. ಕಳ್ಳಬೇಟೆ ತಡೆ ಶಿಬಿರಗಳಿಗೆ ಹಾಗೂ Rapid Response Teams (RRT) ಗಳನ್ನು ಅಂದರೆ ಕಾಡಾನೆ ಹಿಮ್ಮೆಟ್ಟಿಸುವ ತಂಡಗಳನ್ನು ರಚಿಸಿ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ ಹಾಗೂ Wireless Networking ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ. 6. ಕಾಡಾನೆಗಳ ಮಾಹಿತಿಯನ್ನು ಸಂಗ್ರಹಿಸಲು 24 ಗಂಟೆ ಕಾರ್ಯನಿರ್ವಹಿಸುವ ಮಾಹಿತಿಕೇಂದ್ರ ಸ್ಥಾಪಿಸಲಾಗಿದೆ. 7. ಕಾಡಾನೆ ಗುಂಪಿನಲ್ಲಿದ್ದ ವಯಸ್ಕ ಹೆಣ್ಣಾನೆಯನ್ನು ಗುರುತಿಸಿ ಅದಕ್ಕೆ ರೇಡಿಯೋಕಾಲರ್ ಅಳವಡಿಸಿ ಆನೆಗಳ ಚಲನವಲನಗಳ ಬಗ್ಗೆ ಎಸ್.ಎಂ.ಎಸ್. ಹಾಗೂ ವಾಟ್ಸಾಪ್ ಮೂಲಕ ಜನರಿಗೆ ಮಾಹಿತಿಯನ್ನು ನೀಡಿ ಮಾನವ ಪ್ರಾಣಹಾನಿ ಹಾಗೂ ಮಾನವಗಾಯ ತಪ್ಪಿಸಲು ಕ್ರಮ ವಹಿಸಲಾಗುತ್ತಿದೆ. 8. ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಪುಂಡಾನೆಗಳನ್ನು ಗುರುತಿಸಿ. ಸೆರೆಹಿಡಿದು ಆಗಿಂದಾಗ್ಗೆ ಆನೆ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ. 9. ಇತ್ತೀಚಿನ ದಿನಗಳಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಹಾನಿ ಪ್ರಕರಣಗಳಿಗೆ ಇ–ತಂತ್ರಾಂಶದ ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು. ಆದ್ಯತೆ ಮೇರೆಗೆ ನಿಯಮಾನುಸಾರ ಪರಿಶೀಲಿಸಿ. ಶೀಘ್ರವೇ ನೇರವಾಗಿ ಸಂತ್ರಸ್ತರ ಖಾತೆಗೆ ಹಣ ಪಾವತಿಸುವ ಪ್ರಕ್ರಿಯೆಯನ್ನು ಇ–ಪರಿಹಾರ ತಂತ್ರಾಂಶದ ಮೂಲಕ ನಿರ್ವಹಿಸಲಾಗುತ್ತಿದೆ.

ಸಂಖ್ಯೆ: ಅಪಜೀ 168 ಎಫ್‌ಡಬ್ಲ್ಯೂಎಲ್ 2020

(ಆನಂದ್ ಸಿಂಗ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು